ಇಂದು ದಿನಾಂಕ: 27.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು:** ಪ್ರತಿವಾದಿಯ ಪರ ಶ್ರೀ ಡಿ ಟಿ ಟಿ ವಕೀಲರಿಂದ:

ಶಾಂತಮ್ಮ ಮತ್ತು ಗಂಗಮ್ಮ ನನ್ನ ತಂಗಿ ಎಂದರೆ ಸಾಕ್ಷಿಯು ನನ್ನ ಅಕ್ಕ ಗಂಗಮ್ಮ, ತಂಗಿ ಶಾಂತಮ್ಮ ಅಗಿರುತ್ತಾರೆ ಎಂದು ನುಡಿದಿರುತ್ತಾರೆ. ಅವರು ಮೂಲ ಪುರುಷ ಅಡಿವೆಪ್ಪನ ಮಕ್ಕಳು ಎಂದರೆ ಸರಿ. ಸದರಿ ಗಂಗಮ್ಮ ರವರನ್ನು ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಪಕ್ಷಗಾರರನ್ನಾಗಿ ಮಾಡಲು ನಾವು ಅವರಿಗೆ ಮದುವೆ ಸಮಯದಲ್ಲಿ ಕೊಡುವುದನ್ನು ಕೊಟ್ಟು ಮದುವೆ ಮಾಡಿರುತ್ತೇವೆ ಆ ಕಾರಣದಿಂದ ನಾವು ಅವರಿಗೆ ಏನು ಕೊಟ್ಟಿರುವುದಿಲ್ಲ. ಸದರಿ ಗಂಗಮ್ಮ ಹಾಗೂ ಶಾಂತಮ್ಮ ರವರಿಗೆ ಮದುವೆ ಸಮಯದಲ್ಲಿ ಬಾಂಡೇ ಸಾಮಾನು ಹಾಗೂ ತಲಾ 150/- ರೂಗಳಂತೆ ಹಣವನ್ನು ನೀಡಿರುತ್ತೇವೆ. ಆ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ.

2. ನನ್ನ ತಂದೆ ಡಮ್ಮಳ್ಳಿಯಲ್ಲಿ ನಮ್ಮ ಹಿರಿಯಣ್ಣನ ಮನೆಯಲ್ಲಿ ತೀರಿಕೊಂಡಿರುತ್ತಾರೆ. ಎಷ್ಟು ವರ್ಷಗಳ ಕಾಲ ನನ್ನ ತಂದೆ ನನ್ನ ಹಿರಿಯಣ್ಣನ ಮನೆಯಲ್ಲಿ ಇದ್ದರು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ತಂದೆಯನ್ನು ನೀವು ಜೋಪನಾ ಮಾಡಿಲ್ಲವಾ? ಎಂದರೆ ಸಾಕ್ಷಿಯು ನನ್ನ ತಂದೆಯನ್ನು ಜೋಪಾನ ಮಾಡುವುದಾಗಿ ನನ್ನ ದೊಡ್ಡಣ್ಣ ಒಪ್ಪಿಕೊಂಡಿದ್ದು, ಪಂಚರು ಹೇಳಿದಂತೆ ಆತನಿಗೆ ಸರ್ವೆನಂ. 133/ಪಿ2, 3 ಎಕರೆ ಜಮೀನನ್ನು ನನ್ನ ತಂದೆಯನ್ನು ಜೋಪನಾ ಮಾಡುವ ಸಲುವಾಗಿ ನನ್ನ ಅಣ್ಣನಿಗೆ ಬಿಟ್ಟುಕೊಟ್ಟಿರುತ್ತಾರೆ, ಸದರಿ ಜಮೀನಿನಲ್ಲಿ ನಮಗೆ ಯಾರಿಗೂ ಪಾಲನ್ನು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಂತರ ಪಂಚರು ನಮ್ಮ ತಂದೆ ತೀರಿಕೊಂಡ ನಂತರ ಸದರಿ ಜಮೀನನ್ನು 3 ಭಾಗ ಮಾಡಿಕೊಳ್ಳಿ ಎಂದು ಹೇಳಿದ್ದರು. ಆ ರೀತಿ ಹೇಳಿರುವಂತಹ ಪಂಚರು ಈಗ ತೀರಿಕೊಂಡಿರುತ್ತಾರೆ. ಪಂಚರು ಎಂದರೆ ಲೋಕಪ್ಪ ಬಣಕಾರ, ಬಸವನಗೌಡ, ಫಕ್ಕೀರಪ್ಪ ಒಡೇನಪುರ, ಹನುಮಂತಪ್ಪ ಇಂಗಳಗೊಂದಿ ಇತರರ ಹೆಸರು ನನಗೆ ನೆನಪಿರುವುದಿಲ್ಲ. ಅವರಲ್ಲಿ ಎಲ್ಲರೂ ತೀರಿಕೊಂಡಿದ್ದು, ಹನಮಂತಪ್ಪ ಇಂಗಳೊಂದಿ ಇವರು ಮಾತ್ರ ಜೀವಂತವಾಗಿರುತ್ತಾರೆ.

3. ನನ್ನ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಯಲ್ಲಿ 3 ಭಾಗ ಮಾಡಿಕೊಳ್ಳಬೇಕು ಎಂದು ಹೇಳಿ ನಮ್ಮ ವಕೀಲರ ಬಳಿ ಹೇಳಿ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಆ ರೀತಿ ಹೇಳಿ ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸರ್ವೆನಂ.133/ಪಿ2 ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿರುವಂತಹ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ಯಾರಿಂದ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯನ್ನು ನನ್ನ ತಂದೆ ಬಸಲಿಂಗಪ್ಪ ತಂದೆ ಬಸಪ್ಪ ಒಡೇನಪುರ ರವರಿಂದ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ತಂದೆ ಪ್ರತಿವಾದಿ 2 ರಿಂದ 5 ರವರಿಗೆ ನೀಡಿರುವುದರಿಂದ ಅದು ಅವರಿಗೆ ಸೇರಿದಂತಹ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ತಂದೆ ನನ್ನ ದೊಡ್ಡಅಣ್ಣನಿಗೆ ಮೃತ್ಯು ಪತ್ರದ ಮೂಲಕ ಬಿಟ್ಟುಕೊಟ್ಟಿದ್ದು ನಂತರ ನನ್ನ ಅಣ್ಣ ತನ್ನ ಮಕ್ಕಳಾದ ಪ್ರತಿವಾದಿ 5 ರವರಿಗೆ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ಅವರು ನಮಗೆ ಗೊತ್ತಿಲ್ಲದೇ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಆ ರೀತಿ ಖಾತೆ ಬದಲಾವಣೆಯನ್ನು ಪಕ್ಕೀರಪ್ಪ ಮಕ್ಕಳ ಹೆಸರಿಗೆ ಮಾಡಿಕೊಟ್ಟಿದ್ದರಿಂದ ನಮಗೆ ಗೊತ್ತಾಗಿರುತ್ತದೆ. ಆ ರೀತಿ ಖಾತೆ ಆದ ನಂತರ ನಾನು ಕಂದಾಯ ಅಧಿಕಾರಿಗಳ ಬಳಿ ವಿಚಾರಣೆ ಮಾಡಿರುವುದಿಲ್ಲ. ಆ ರೀತಿ ವಿಚಾರಣೆ ಮಾಡಲು ನನಗೆ ಹುಷಾರಿಲ್ಲದಿದ್ದ ಕಾರಣದಿಂದ ನನಗೆ ಹೋಗಿ ವಿಚಾರಣೆ ಮಾಡಲು ಸಾದ್ಯವಾಗಿರಲಿಲ್ಲ ಎಂದು ನುಡಿದಿರುತ್ತಾರೆ. ನನ್ನ ಇತರೆ ಅಣ್ಣ ತಮ್ಮಂದಿರು ಕೂಡ ಯಾವುದೇ ವಿಚಾರಣೆ ಮಾಡಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ನಾವು ಈಗಾಗಲೇ ಪ್ರತ್ಯೇಕವಾಗಿ ವಹಿವಾಟು ಮಾಡಿಕೊಂಡು ಬರುತ್ತಿರುವುದರಿಂದ ನಮಗೆ ಹಿಸ್ಸೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.